**ಕರ್ನಾಟಕ ಸರ್ಕಾರ**

**(ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ)**

ಸಂಖ್ಯೆ:ಬಿಟಿಇ/05/ಇಎಪಿ/2022

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001,
ದಿನಾಂಕ:17.03.2023.

**ಸು ತ್ತೋ ಲೆ**

**ವಿಷಯ:** ಪರೀಕ್ಷಾ ಫಲಿತಾಂಶ ಹಿಂದಕ್ಕೊಪ್ಪಿಸುವ ಅರ್ಜಿಗಳ ಬಗ್ಗೆ.

**ಉಲ್ಲೇಖ:** 1. ಸರ್ಕಾರಿ ಆದೇಶ ಸಂ:ಇಡಿ/258/ಟಿಪಿಇ/12, ಬೆಂಗಳೂರು, ದಿ:6-11-1997.

2 ಸರ್ಕಾರಿ ಆದೇಶ ಸಂ:ಇಡಿ/258/ಟಿಪಿಇ/98, ಬೆಂಗಳೂರು, ದಿ:11-8-2000

3 ಸರ್ಕಾರಿ ಆದೇಶಸಂ;ಎಫ್‌ಡಿ/11/ಟಿಪಿಇ/2007,ಬೆಂಗಳೂರು,ದಿ:03-12-2007.

-0-

ತಾಂತ್ರಿಕ ಪರೀಕ್ಷಾ ಮಂಡಳಿಯ ವಿವಿಧ ಡಿಪ್ಲೊಮಾ ಕೋರ್ಸುಗಳ **ಜನವರಿ/ಫೆಬ್ರವರಿ** 2023ರ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ಹಿಂದಕ್ಕೊಪ್ಪಿಸಲು ಇಚ್ಛಿಸುವ ಅಭ್ಯರ್ಥಿಗಳ ಬಗ್ಗೆ ಪ್ರಿನ್ಸಿಪಾಲರುಗಳು ಅಭ್ಯರ್ಥಿಗಳ ಅಂಕಪಟ್ಟಿಗಳು ಬರುವವರೆಗೆ ಕಾಯದೆ ಫಲಿತಾಂಶದ ಜೊತೆಗೆ ಆನ್‌ಲೈನ್‌ನಲ್ಲಿ (BTE Linx) ಕಳುಹಿಸಿರುವ ಮಾರ್ಕ್ಸ್ ರಿಜಿಸ್ಟರ್‌ನಲ್ಲಿ ಸೂಚಿಸಿರುವ ಅಂಕಗಳ ಆಧಾರದ ಮೇಲೆ ಫಲಿತಾಂಶ ಪ್ರಕಟವಾದ ***01 ತಿಂಗಳೊಳಗಾಗಿ* ದಿನಾಂಕ:17-04-2023 *ರೊಳಗೆ*** ಫಲಿತಾಂಶ ಹಿಂದಕ್ಕೊಪ್ಪಿಸುವ ಅರ್ಜಿಗಳನ್ನು ಅಪೇಕ್ಷಿತ ಅಭ್ಯರ್ಥಿಗಳಿಂದ ಪಡೆದು ಕ್ರೋಢೀಕರಿಸಿ ತಾಂತ್ರಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಯವರಿಗೆ **ದಿನಾಂಕ:24-04-2023 *ರೊಳಗೆ*** ಕಳುಹಿಸಿಕೊಡಲು ಸೂಚಿಸಲಾಗಿದೆ. ಅಂಕಪಟ್ಟಿಗಳು ಬರಲಿಲ್ಲವೆಂಬ ಕಾರಣದಿಂದ ನಿಗಧಿತ ಸಮಯದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಇದಲ್ಲದೆ ಉಲ್ಲೇಖ(3)ರ ಸರ್ಕಾರದ ಆದೇಶದ ಪ್ರಕಾರ ಪರೀಕ್ಷಾ ಫಲಿತಾಂಶ ಹಿಂದಕ್ಕೊಪ್ಪಿಸುವ **ಶುಲ್ಕ ರೂ.500-00** ಗಳನ್ನು ಅಭ್ಯರ್ಥಿ ಅರ್ಜಿ ಸಲ್ಲಿಸಿದ ದಿನಾಂಕದಿಂದ **03** ದಿನಗಳೊಳಗೆ ಸರ್ಕಾರಕ್ಕೆ ಜಮಾ ಮಾಡಲು ತಿಳಿಸಲಾಗಿದೆ. ಇದಕ್ಕೆ ತಪ್ಪಿದಲ್ಲಿ ಸಂಸ್ಥೆಯವರು ಉಲ್ಲೇಖಿಸಿದ ಸರ್ಕಾರಿ ಆದೇಶದ ಪ್ರಕಾರ ಪ್ರತಿದಿನ ತಡವಾಗಿ ಜಮಾ ಮಾಡಿದುದಕ್ಕೆ ದಂಡ ಶುಲ್ಕವೆಂದು ದಿನವೊಂದಕ್ಕೆ **ರೂ.1000-00** ಗಳಂತೆ ಪಾವತಿ ಮಾಡಬೇಕಾಗಿರುತ್ತದೆ ಎಂದು ತಿಳಿಸಲಾಗಿದೆ.

17/3/23

**ಕಾರ್ಯದರ್ಶಿ,**
**ತಾಂತ್ರಿಕ ಪರೀಕ್ಷಾ ಮಂಡಳಿ,**
**ಬೆಂಗಳೂರು.**

17/3/23

**ಇವರಿಗೆ,**

ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ -ಮುಂದಿನ ಸೂಕ್ತ ಕ್ರಮಕ್ಕಾಗಿ.

**ಪ್ರತಿ:-**

1. ಆಯುಕ್ತರ ಆಪ್ತಶಾಖೆ- ಅವಗಾಹನೆಗಾಗಿ.
2. ನಿರ್ದೇಶಕರ ಆಪ್ತಶಾಖೆ- ಅವಗಾಹನೆಗಾಗಿ.
3. ಸಹಾಯಕ ನಿರ್ದೇಶಕರು (ಎಸಿಎಂ) ತಾಂತ್ರಿಕ ಶಿಕ್ಷಣ ಇಲಾಖೆ-ಮಾಹಿತಿಗಾಗಿ.
4. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
5. ಇಸಿಎಸ್/ಇಎಫ್‌ಎಸ್/ಇಆರ್‌ಎಸ್, ಮುಂದಿನ ಕ್ರಮಕ್ಕಾಗಿ.
6 ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ರಿಜಿಸ್ಟ್ರಾರ್ (ಪರೀಕ್ಷೆ)
8. ಕಾರ್ಯದರ್ಶಿಗಳ ಆಪ್ತಶಾಖೆ.
9. ಉಪ ನಿರ್ದೇಶಕರು (ಪರೀಕ್ಷೆ)
10. ಅಧೀಕ್ಷಕರು (ಆರ್.ಡಿ.ಎಂ.) (1) ರಿಂದ (15)
11. ಗಣಕ ಕೇಂದ್ರ-ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು.
12. ಕಚೇರಿ ಪ್ರತಿ.